ಕಿರು ಮುಖವಾಡನಾಟಕ

# ಸೂರ್ಯ ಸತ್ತ

೧-೨

ಆಕರ: ಜಾನಪದ ಕಥೆ
ಅನುವಾದ: ದೀಪಾ ಜೋಶಿ, ಧ್ವನಿ ಬಳಗ
ನಾಟಕ ರೂಪಾಂತರ: ಶಿವಾನಂದ ಹೊಂಬಳ, ಧ್ವನಿ ಬಳಗ



ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

೨೦೧೯-೨೦ ಜೂನ್-ಜುಲೈ

ಆರಂಭ - ಪೂರಣ ಯೋಜನೆ
Arambha-Poorana
2019-20 Project
is Supported by Many
Individual Donors

**ಶಿಕ್ಷಕರು ಮತ್ತು ಪಾಲಕರಲ್ಲಿ ನಿವೇದನೆ,**

ಆತ್ಮೀಯರೇ,

೧ ರಿಂದ ೭ನೇ ತರಗತಿ ಮಕ್ಕಳು ತಮ್ಮ ತಮ್ಮ ತರಗತಿಗಳಲ್ಲಿ ಆಡಲು 'ಸೂರ್ಯ ಸತ್ತ' ಎಂಬ ಕಿರು ಮುಖವಾಡ ನಾಟಕವನ್ನು ಕೊಡುತ್ತಿದ್ದೇವೆ. ಈ ಮುಖವಾಡ ನಾಟಕ ಮೂಲತಃ ಒಂದು ಕಥೆಯನ್ನು ಆಧರಿಸಿದ್ದು, ಕಥೆಯೊಂದನ್ನು ನಾಟಕವಾಗಿ ರೂಪಾಂತರಿಸುವ ಕೌಶಲವನ್ನು ಬೆಳೆಸುವುದು ಇಲ್ಲಿನ ಒಂದು ಉದ್ದೇಶ. ಮಕ್ಕಳಲ್ಲಿ ಸಂಭಾಷಣ ಕೌಶಲ, ಜೊತೆಗೆ ಆತ್ಮಸ್ಥೈರ್ಯ ಬೆಳೆಸುವುದು ಇಲ್ಲಿನ ಇನ್ನೊಂದು ಮುಖ್ಯ ಉದ್ದೇಶ. ಕಥೆಯನ್ನು ಓದಿ, ನಾಟಕವನ್ನೂ ಓದಿ, ಮುಖವಾಡ ಧರಿಸಿ ಆಡುವಂತಾಗಲಿ ಎಂಬ ಆಶಯದೊಂದಿಗೆ.....

**ಕ್ರಮ:**

೧. ಶಿಕ್ಷಕರು ಕಥೆ ಮತ್ತು ನಾಟಕವನ್ನು ತಾವೇ ಒಂದು ಸಲ ಓದಿಕೊಳ್ಳುವುದು.
೨. ಚಿಕ್ಕ ಮಕ್ಕಳಿಗೆ ಗಟ್ಟಿಯಾಗಿ ಓದಿ ಹೇಳುವುದು, ದೊಡ್ಡ ಮಕ್ಕಳು ತಾವೇ ಓದಿಕೊಳ್ಳಲು ಮಾರ್ಗದರ್ಶನ ಮಾಡುವುದು.
೩. ಪ್ರಾಣಿಗಳ ಮುಖವಾಡಗಳನ್ನು ತಳ ಕಾಗದದಿಂದ ಬಿಡಿಸಿಕೊಳ್ಳುವುದು. ಅದಕ್ಕೆ ಸೂಕ್ತ ಬಣ್ಣ ಹಚ್ಚಿ (ಕ್ರೆಯಾನ್/ಬಣ್ಣದ ಪೆನ್ಸಿಲ್ ಒಳ್ಳೆಯದು) ಸಿದ್ಧಪಡಿಸಿಕೊಳ್ಳುವುದು.
೪. ಪಾತ್ರಗಳನ್ನು ಹಂಚಿ, ಅವರವರ ಮಾತು ಕಲಿಸುವುದು.
೫. ಮುಖವಾಡಗಳನ್ನು ಧರಿಸಿ ಮಾತು ಹೇಳುವುದನ್ನು ಕಲಿತು ಅಭಿನಯಿಸುವುದು.
೬. ಹಿನ್ನಲೆ ಸನ್ನಿವೇಶಕ್ಕೆ ತಕ್ಕಂತೆ ೬೮ ಸೆಂ.ಮೀ ಅಗಲ, ೪೨ ಸೆಂ.ಮೀ ಉದ್ದ ಅಳತೆಯ ಒಂದು ದೊಡ್ಡ ಕಾಗದದಲ್ಲಿ ಸೂರ್ಯಾಸ್ತ ಮತ್ತು ಸೂರ್ಯೋದಯದ ಸನ್ನಿವೇಶದ ಚಿತ್ರಗಳನ್ನು ಸಿದ್ಧಪಡಿಸಿಕೊಳ್ಳುವುದು ಸೂಕ್ತ.

ಕಥೆ

# ಸೂರ್ಯ ಸತ್ತ

ಒಂದಾನೊಂದು ಕಾಲದಲ್ಲಿ ಒಂದು ದೊಡ್ಡ ಕಾಡು. ಆ ಕಾಡಿನಲ್ಲಿ ಗಿಳಿ, ಕತ್ತೆ, ಬೆಕ್ಕು, ನಾಯಿ, ಹೀಗೆ ಅನೇಕ ಪ್ರಾಣಿಗಳು ಆ ಕಾಡಿನಲ್ಲಿ ವಾಸವಾಗಿದ್ದವು. ಒಂದು ದಿನ ಗಿಳಿ ಆಹಾರ ಹುಡುಕಲು ಹಾರಿತು. ಹಾರಿ ಹಾರಿ ಆಯಾಸಗೊಂಡ ಗಿಳಿ ಪರ್ವತದ ಅಂಚಿನಲ್ಲಿರುವ ಒಂದು ಮರದ ತುದಿಯಲ್ಲಿ ಕುಳಿತಿತು. ಪರ್ವತದ ಕೆಳಗೆ ಒಂದು ನದಿ ಹರಿಯುತ್ತಿತ್ತು.

ಅದು ಸೂರ್ಯಾಸ್ತದ ಸಮಯವಾಗಿತ್ತು. ಮರದಲ್ಲಿ ಕುಳಿತಿದ್ದ ಗಿಳಿ ಸೂರ್ಯಾಸ್ತವನ್ನು ಗಮನಿಸಿತು. ಪಶ್ಚಿಮದಲ್ಲಿ ಮುಳುಗಿದ ಸೂರ್ಯನನ್ನು ನೋಡಿದ ಗಿಳಿ "ಸೂರ್ಯ ನದಿಯಲ್ಲಿ ಮುಳಗಿ ಸತ್ತು ಹೋದ" ಎಂದುಕೊಂಡಿತು. ಗಾಬರಿಯಿಂದ ಗಿಳಿ ಸೂರ್ಯ ಸತ್ತ ಸುದ್ದಿಯನ್ನು ಎಲ್ಲರಿಗೂ ತಿಳಿಸಬೇಕು ಎಂದು ಕಾಡಿಗೆ ಮರಳಿ ಬಂದಿತು. ದಾರಿಯಲ್ಲಿ ಅದಕ್ಕೆ ಒಂದು ಹಳೆಯ ಡ್ರಂ ಸಿಕ್ಕಿತು. ಗಿಳಿ ದೊಡ್ಡ ಕೋಲನ್ನು ಹಿಡಿದು ಡ್ರಂ ಅನ್ನು ಜೋರಾಗಿ ಬಾರಿಸಿತು.

ಇದ್ದಕ್ಕಿದ್ದಂತೆ ಶಾಂತವಾದ ಈ ಸಂಜೆ ಹೊತ್ತಿನಲ್ಲಿ "ಢಂ...ಢಂ..ಢಂ..." ಎಂಬ ಶಬ್ಧ ಕಾಡಿನ ಪ್ರಾಣಿಗಳಿಗೆ ಭಯ ಹುಟ್ಟಿಸಿತು. ಬೆಕ್ಕು, ನಾಯಿ, ಕತ್ತೆಗಳು ಶಬ್ಧ ಬಂದ ಕಡೆ ಏನಾಯಿತೋ ನೋಡೋಣ ಎಂದು ಓಡಿ ಬಂದವು. ಓಡಿ ಬಂದು ನೋಡಿದರೆ ಗಿಳಿ ಡ್ರಂ ಬಾರಿಸುತ್ತಿತ್ತು. ಕಾಡಿನ ಬೆಕ್ಕಮ್ಮ "ಏಯ್ ಗಿಳಿಯಕ್ಕಾ ಏನಾಯ್ತು? ಏಕೆ ಇಷ್ಟು ಜೋರಾಗಿ ಬಾರಿಸುತ್ತಾ ಇದ್ದೀಯಾ?" ಎಂದು ಕೇಳಿತು.

ಗಿಳಿ, "ನಿಮಗೆ ಒಂದು ವಿಷಯ ಗೊತ್ತಾ? ಸೂರ್ಯ ನದಿಯ ನೀರಿನಲ್ಲಿ ಮುಳಗಿ ಸತ್ತು ಹೋದ. ನಾನೇ ನನ್ನ ಕಣ್ಣಾರೆ ಆ ಪರ್ವತದ ಅಂಚಿನಲ್ಲಿ ನೋಡಿದೆ. ನಾಳೆಯಿಂದ ನಮಗೆ ಬೆಳಕೇ ಆಗುವುದಿಲ್ಲ" ಎಂದು ಹೇಳಿತು. ಎಲ್ಲಾ ಪ್ರಾಣಿಗಳಿಗೂ ಗಿಳಿಯ ಮಾತು ಕೇಳಿ ತಮ್ಮ ಕಿವಿಯನ್ನು ತಾವೇ ನಂಬದಷ್ಟು ಆಶ್ಚರ್ಯವಾಯಿತು. ಆದರೂ ಎಲ್ಲವಕ್ಕೂ ಗಿಳಿಯ ಮಾತಿನಲ್ಲಿ ನಂಬಿಕೆ ಇತ್ತು. ಅದು ಸುಳ್ಳು ಹೇಳುವುದಿಲ್ಲ ಎಂದುಕೊಂಡಿದ್ದವು. ನಾಯಿ ಮತ್ತು ಗಿಳಿ "ಅಯ್ಯೋ ನಾಳೆಯಿಂದ ಸೂರ್ಯನಿಲ್ಲದೆ ಹೇಗೆ ಜೀವನ ನಡೆಸೋದು?" ಎಂದು ಚಿಂತೆ ಮಾಡಿದರೆ. ಕತ್ತೆ,

ಬೆಕ್ಕು ಸೂರ್ಯ ಸತ್ತಿದ್ದಕ್ಕೆ ಬಹಳ ಖುಷಿಪಟ್ಟವು.

ನಾಯಿ, "ಅಯ್ಯೋ ಸೂರ್ಯ ಬರದಿದ್ದರೆ. ಬೆಳಕೇ ಆಗದಿದ್ದರೆ ಇನ್ನು ಮುಂದೆ ನಾನು ಇಡೀ ರಾತ್ರಿ ಮನೆಯನ್ನು ಕಾಯುತ್ತಲೇ ಇರಬೇಕು. ನನಗೆ ನಿದ್ದೇನೇ ಇಲ್ಲ. ಹೇಗಪ್ಪಾ ಬದುಕೋದು?" ಎಂದು ಚಿಂತೆ ಮಾಡಿತು.

ಕತ್ತೆಗಂತೂ ಬಹಳ ಖುಷಿ ಆಗಿತ್ತು. ಅದು, "ಆಹಾ! ಸೂರ್ಯ ಸತ್ತ. ಇನ್ನು ಬೆಳಕೇ ಆಗುವುದಿಲ್ಲ. ಬೆಳಕಾಗಿಲ್ಲ ಅಂದ್ರೆ ನನ್ನ ಯಜಮಾನ ಎದ್ದು ಕೆಲಸಕ್ಕೂ ಹೋಗಲ್ಲ. ನನ್ನ ಮೈಮೇಲೆ ಭಾರದ ಮೂಟೆಗಳನ್ನು ಹೇರುವುದೂ ಇಲ್ಲ. ನಾನು ಇನ್ನು ಆರಾಮವಾಗಿ ಬದುಕಬಹುದು" ಎಂದು ಆಲೋಚಿಸಿ ಒಳಗೊಳಗೇ ಖುಷಿಪಟ್ಟಿತು.

ಬೆಕ್ಕಮ್ಮ, ಆಹಾ! ಎಂತಾ ಖುಷಿ ಸುದ್ದಿ. ಇನ್ನು ಮುಂದೆ ಸೂರ್ಯನಿಲ್ಲದೆ ಬರೀ ಕತ್ತಲೋ ಕತ್ತಲು. ರಾತ್ರಿಯೋ ರಾತ್ರಿ. ನಾನು ಯಾರ ಮನೆಗೆ ಬೇಕಾದರೂ ಹೋಗಿ ಹಾಲು ಕುಡಿಯಬಹುದು. ನನ್ನ ಕಳ್ಳತನ ಯಾರಿಗೂ ಗೊತ್ತಾಗುವುದೇ ಇಲ್ಲ. ಇನ್ನು ಮುಂದೆ ನನಗೆ ಪ್ರತಿದಿನವೂ ಹೊಟ್ಟೆತುಂಬ ಹಾಲು ಸಿಗುತ್ತದೆ" ಎಂದು ಕುಣಿದಾಡಿತು. ಅದು ಗಿಣಿಯಕ್ಕನಿಗೆ ಬಹಳ ಧನ್ಯವಾದ ಹೇಳಿತು. ಹೀಗೆ ಕೆಲವು ಪ್ರಾಣಿಗಳು ಖುಷಿಯಿಂದ ಇನ್ನು ಕೆಲವು ಬೇಸರಗಳಿಂದ ತಮ್ಮ ತಮ್ಮ ಮನೆ ಸೇರಿ ಮಲಗಿದವು.

ಮರುದಿನ ಯಥಾಪ್ರಕಾರವಾಗಿ ಸೂರ್ಯ ಉದಯಿಸಿದ. ಸೂರ್ಯ ಸತ್ತನೆಂಬ ಸುದ್ಧಿ ಸುಳ್ಳಾಗಿತ್ತು. ಎಲ್ಲಾ ಪ್ರಾಣಿಗಳೂ ತಮ್ಮ ತಮ್ಮ ಕೆಲಸದಲ್ಲಿ ತೊಡಗಿದವು. ನಾಯಿಗೆ ಸೂರ್ಯೋದಯವಾಗಿದ್ದು ತುಂಬಾ ಖುಷಿಯಾಯಿತು. ಕತ್ತೆ ಬೇಸರದಿಂದ ಮೂಟೆ ಹೊತ್ತುಕೊಂಡು "ಏನು ಗಿಣಿಯಕ್ಕನೋ ಏನೋ, ಸುಳ್ಳು ಹೇಳಿ ಆಸೆ ಹುಟ್ಟಿಸಿದ್ಲು" ಎಂದು ಬೈಯ್ಯುತ್ತ ಹೋಯಿತು. ಬೆಕ್ಕಿಗೆ ಮಾತ್ರ ಗಿಳಿ ಮೇಲೆ ತುಂಬಾ ಕೋಪ ಬಂತು. ಗಿಣಿಯಕ್ಕನನ್ನ ಕೊಂದೇ ಬಿಡಬೇಕು ಅನ್ನಿಸಿತು. ಅವೆರಡೂ ಬಹಳ ಜಗಳ ಆಡಿದವು. ಅವರ ಜಗಳ ಇಂದಿಗೂ ಕೂಡ ಮುಗಿದಿಲ್ಲ. ಅವರ ಮಕ್ಕಳು ಮೊಮ್ಮಕ್ಕಳು ಯಾರೂ ಒಟ್ಟಿಗೆ ಇರುವುದಿಲ್ಲ. ಅವು ಯಾವಗಲೂ ಜಗಳವಾಡುತ್ತಲೇ ಇರುತ್ತವೆ. *

**ಕಿರು ಮುಖವಾಡನಾಟಕ.....**

# ಸೂರ್ಯ ಸತ್ತ

## ದೃಶ್ಯ ೧

**(ದೃಶ್ಯ ವಿವರ: ಬೆಟ್ಟ ಕಣಿವೆಗಳ ಸಾಲು; ಕೆಳಗೆ ಹರಿಯುವ ನದಿ; ಸೂರ್ಯ ನಿಧಾನವಾಗಿ ಮುಳುಗುತ್ತಿರುವ ಸಮಯ)**

**ಗಿಳಿ:** (ಸಂತೋಷದಿಂದ) ಆಹಾ! ಈ ಬೆಟ್ಟಗಳು, ಗಿಡಮರ, ನದಿ ಎಷ್ಟು ಸುಂದರವಾಗಿದೆ. (ಸೂರ್ಯ ಮುಳುಗುತ್ತಿರುವುದನ್ನು ನೋಡಿ, ಗಾಬರಿಯಿಂದ ಜೋರು ದನಿಯಲ್ಲಿ ....) ಅಯ್ಯೋ! ಅಯ್ಯೋ! ಇದೇನಾಗ್ತಿದೆ? ಸೂರ್ಯ ಸಾಯ್ತಾ ಇದ್ದಾನಲ್ಲಾ. ಅಯ್ಯಯ್ಯೋ ಹೋದ! ಹೋದ! ಹೋದ... ಸತ್ತೇ ಹೋದ. ಈ ಸುದ್ದೀನ ನನ್ನ ಗೆಳೆಯ – ಗೆಳತಿಯರಿಗೆಲ್ಲ ತಿಳಿಸಬೇಕು.

(ಗಿಳಿ ಮರಳಿ ಊರಿನತ್ತ ಹಾರುವುದು. ರಂಗದ ಎಡ ಬದಿಯಿಂದ ಕಾಣೆಯಾಗಿ, ಬಲ ಬದಿಯಿಂದ ಬರುತ್ತದೆ. ಅಷ್ಟರಲ್ಲಿ ರಂಗದ ಮೇಲೆ ಒಂದು ಹಲಗೆ ಇಡಬೇಕು. ಗಿಳಿ ಅದನ್ನು ತೆಗೆದುಕೊಂಡು ಬಾರಿಸಲು ಆರಂಭಿಸುತ್ತದೆ)

ಢಂ! ಢಂ! ಢಢ ಢಂ! ಢಂ! ಢಂ! ಢಢ ಢಂ (ಬಾರಿಸುತ್ತಾ ಗಿಳಿಯಕ್ಕ ರಂಗದ ಎಡ ಬದಿಯಿಂದ ಹಿನ್ನೆಲೆಗೆ ಹೋಗುತ್ತಾಳೆ)

(ಮರುಕ್ಷಣ ಊರಿನ ಪ್ರಾಣಿಗಳು ಗಾಬರಿಯಿಂದ ಕೂಗುವ ಶಬ್ದ ಹಿನ್ನೆಲೆಯಲ್ಲಿ ಕೇಳಿಸಬೇಕು. ಸ್ವಲ್ಪಹೊತ್ತು ಆ ಗೊಂದಲ ಇರಬೇಕು. ಅನಂತರ ಮೊದಲು ಬೆಕ್ಕಮ್ಮಾ ಬಲ ಬದಿಯಿಂದ ರಂಗದಲ್ಲಿ ಕಾಣಿಸಿಕೊಳ್ಳುತ್ತದೆ)

**ಬೆಕ್ಕು:** (ಗಾಬರಿಯಿಂದ) ನಾಯಿಯಣ್ಣಾ, ಕತ್ತೆಯಣ್ಣಾ, ಕೇಳಿಸ್ತಾ ಇದೆಯಾ? ಇದು ಎಂಥಾ ಶಬ್ದ? ಎಷ್ಟು ಜೋರಾಗಿದೆ. ಯಾರು ಬಾರಿಸ್ತಾ ಇದ್ದಾರೆ? (ಕತ್ತೆ ಮತ್ತು ನಾಯಿ ಬಲ ಬದಿಯಿಂದ ರಂಗಕ್ಕೆ ಬರುತ್ತವೆ.)

**ನಾಯಿ:** ನನಗೂ ಅದೇ ಗಾಬರಿ.

**ಕತ್ತೆ:** ನನಗಂತೂ ಜೀವಾನೇ ಹೋದಹಾಗೆ ಅನಿಸ್ತಿದೆ. ಎಲ್ಲರೂ ಬರ್ರಿ. ಹುಡುಕೋಣ.

(ಎಲ್ಲವೂ ರಂಗದ ಎಡಬದಿಯಿಂದ ಹೊರಗೆ ಹೋಗುವುವು.)

## ದೃಶ್ಯ ೨

(**ದೃಶ್ಯ ವಿವರ:** ಗಿಳಿ ಡ್ರಂ ಬಾರಿಸುತ್ತಿರುವ ದೃಶ್ಯ. ಬೆಕ್ಕು, ನಾಯಿ, ಕತ್ತೆಗಳು ಬಲಬದಿಯಿಂದ ರಂಗ ಪ್ರವೇಶ ಮಾಡುತ್ತವೆ.)

**ಬೆಕ್ಕು:** ಏಯ್ ಗಿಳಿಯಕ್ಕ ಏನಾಯ್ತು? ಏಕೆ ಇಷ್ಟು ಜೋರಾಗಿ ಬಾರಿಸುತ್ತಾ ಇದ್ದೀಯಾ?

**ಗಿಳಿ:** ನಿಮಗೆ ಒಂದು ವಿಷಯ ಗೊತ್ತಾ?

**ಬೆಕ್ಕು–ನಾಯಿ–ಕತ್ತೆ:** ಏನು ಏನು?

**ಗಿಳಿ:** ಸೂರ್ಯ ಸತ್ತು ಹೋದ!

**ಬೆಕ್ಕು–ನಾಯಿ:** ಅಯ್ಯೋ ದೇವರೇ! ಹೇಗೆ ಸತ್ತನವ್ವ ಸೂರ್ಯ?

**ಗಿಳಿ:** ನದಿಯ ನೀರಿನಲ್ಲಿ ಮುಳಗಿ ಸತ್ತು ಹೋದ. ನಾನೇ ನನ್ನ ಕಣ್ಣಾರೆ ಆ ಬೆಟ್ಟಗಳ ಸಾಲಿನ ಹತ್ತಿರ ನೋಡಿದೆ.

**ಬೆಕ್ಕು:** (ಗಾಬರಿ ಮತ್ತು ದುಃಖದಿಂದ) ಅಯ್ಯೋ ದೇವರೇ ಇನ್ನೇನಪ್ಪಾ ನಮ್ಮ ಗತಿ?

**ಗಿಳಿ:** ನಾಳೆಯಿಂದ ನಮಗೆ ಬೆಳಕೇ ಆಗುವುದಿಲ್ಲ.

**ನಾಯಿ:** ಅಯ್ಯೋ ನಾಳೆಯಿಂದ ಸೂರ್ಯ ಇರೋದಿಲ್ಲ. ಹೇಗಪ್ಪಾ ಬದುಕೋದು?

**ಕತ್ತೆ:** ಗಿಳಿಯಕ್ಕಾ ನನಗೆ ಮಾತ್ರ ಇದು ಒಳ್ಳೆ ಸುದ್ದಿ! ಅಂತೂ ಸೂರ್ಯ ಸತ್ತು ನಮ್ಮ ಕತ್ತೆ ಕುಲಕ್ಕೆ ಬಹಳ ಉಪಕಾರ ಮಾಡಿದ. ನಂಗಂತೂ ಬಹಳ ಖುಷಿ ಆಗ್ತಾ ಇದೆ.

**ಬೆಕ್ಕು:** ನಿಜ ಹೇಳತೀನಿ. ಸೂರ್ಯ ಸತ್ತಿದ್ದಕ್ಕೆ ನನಗೂ ಹಾಲು ಕುಡಿದಷ್ಟು ಖುಷಿ ಆಗ್ತಿದೆ!

**ಗಿಳಿ:** ನಾಯಿಯಣ್ಣಾ ಇವರಿಬ್ಬರೂ ಖುಷಿ ಆಗಿದೆಯಂತೆ. ಆದರೆ, ನೀನೇಕೆ ಬೇಸರ ಮಾಡ್ಕೊಂಡಿದ್ದೀಯಾ?

**ನಾಯಿ:** ಅಯ್ಯೋ ಸೂರ್ಯ ಬರದಿದ್ದರೆ. ಬೆಳಕೇ ಆಗದಿದ್ದರೆ ಇನ್ನು ಮುಂದೆ ನಾನು ಇಡೀ ರಾತ್ರಿ ಮನೆಯನ್ನು ಕಾಯುತ್ತಲೇ ಇರಬೇಕು. ನನಗೆ ನಿದ್ದೇನೇ ಇರೋದಿಲ್ಲ. ಇದೇ ನನಗೆ ಚಿಂತೆ ಆಗಿದೆ.

**ಗಿಳಿ:** ಕತ್ತೆಯಣ್ಣ ನೀನೇಕೆ ಇಷ್ಟು ಖುಷಿಯಾಗಿರುವೆ?

**ಕತ್ತೆ:** ಆಹಾ! ಸೂರ್ಯ ಸತ್ತ. ಇನ್ನು ಬೆಳಕೇ ಆಗುವುದಿಲ್ಲ. ಬೆಳಕಾಗಿಲ್ಲ ಅಂದ್ರೆ ನನ್ನ

ಯಜಮಾನ ಎದ್ದು ಕೆಲಸಕ್ಕೂ ಹೋಗಲ್ಲ. ನನ್ನ ಮೈಮೇಲೆ ಭಾರವಾದ ಮೂಟೆಗಳನ್ನು ಹೇರುವುದೂ ಇಲ್ಲ. ನಾನು ಇನ್ನೂ ಆರಾಮವಾಗಿ ಬದುಕಬಹುದು.

**ಬೆಕ್ಕು:** ಆಹಾ! ಎಂಥಾ ಖುಷಿ ಸುದ್ದಿ ಕೊಟ್ಟಿದ್ದೀ ಗೊತ್ತಾ ಗಿಣಿಯಕ್ಕಾ, ಇನ್ನು ಮುಂದೆ ಸೂರ್ಯನಿಲ್ಲದೆ ಬರೀ ಕತ್ತಲೋ ಕತ್ತಲು. ರಾತ್ರಿಯೋ ರಾತ್ರಿ. ನಾನು ಯಾರ ಮನೆಗೆ ಬೇಕಾದರೂ ಹೋಗಿ ಹಾಲು ಕುಡಿಯಬಹುದು. ನನ್ನ ಕಳ್ಳತನ ಯಾರಿಗೂ ಗೊತ್ತಾಗುವುದೇ ಇಲ್ಲ. ಇನ್ನು ಮುಂದೆ ನನಗೆ ಪ್ರತಿದಿನವೂ ಹೊಟ್ಟೆ ತುಂಬ ಹಾಲು ಸಿಗುತ್ತದೆ!

**ಗಿಳಿ:** ಸರಿ ನೀವೆಲ್ಲ ಮನೆಗೆ ಹೋಗ್ರೀ. ಗೂಡಿನಲ್ಲಿ ನನ್ನ ಹೆಂಡತಿ ಮಕ್ಕಳು ಕಾಯ್ತಾ ಇರ್ತಾರೆ. ನಾನಿನ್ನು ಹೊರಡ್ತೀನಿ. (ಎಲ್ಲವೂ ತಮ್ಮ ತಮ್ಮ ಮನೆಗೆ ಹೋಗುವವು)

## ದೃಶ್ಯ ೩

**(ಸನ್ನಿವೇಶ– ಸೂರ್ಯ ಪೂರ್ವದಲ್ಲಿ ಹುಟ್ಟುತ್ತಿರುವ ದೃಶ್ಯ)**

**ಗಿಳಿ:** ಅಯ್ಯೋ ಸೂರ್ಯ ಸತ್ತೇ ಇಲ್ವಲ್ಲಪ್ಪಾ! ನಾನು ತಪ್ಪು ತಿಳಿದುಕೊಂಡೆ. ಎಲ್ಲರಿಗೂ ಸೂರ್ಯ ಸತ್ತ ಅಂತ ಹೇಳಿದೆ. ಈಗ ನಾನು ನನ್ನ ಗೆಳೆಯರ ಕೈಗೆ ಸಿಕ್ಕರೆ ನನ್ನ ಕಥೆ ಮುಗೀತು.

**ನಾಯಿ:** (ರಂಗದೊಳಗೆ ಬರುತ್ತಾ–ಖುಷಿ ಮತ್ತು ಆಶ್ಚರ್ಯದಿಂದ ಸೂರ್ಯನತ್ತ ನೋಡಿ) ಅರೇ! ಸೂರ್ಯ ಸತ್ತೇ ಇಲ್ಲ. ಮತ್ತೆ ಹುಟ್ಟಿ ಬಂದಿದ್ದಾನೆ. ಹುಚ್ಚು ಗಿಣಿಯಕ್ಕಾ ಸುಳ್ಳು ಸುದ್ದಿ ಹೇಳಿದಳು. ನನ್ನನ್ನ ಬಹಳ ಹೆದರಿಸಿಬಿಟ್ಟಿದ್ಲು. ರಾತ್ರಿಯೆಲ್ಲಾ ಮನೆ ಕಾದು ಕಾದು ಸಾಕಾಗಿದೆ. ನಾ ಆರಾಮಾಗಿ ಮಲಗ್ತೀನಿ.

**ಕತ್ತೆ:** (ಮೂಟೆ ಹೊತ್ತುಕೊಂಡು ರಂಗ ಪ್ರವೇಶಿಸುತ್ತಾ ಬೇಸರದಿಂದ) ಏನು ದರಿದ್ರ ಗಿಣಿಯೋ ಏನೋ. ಸುಳ್ಳು ಹೇಳಿ ಆಸೆ ಹುಟ್ಟಿಸಿದ್ಲು. ಈಗ ನೋಡಿದರೆ ಸೂರ್ಯ ಎದ್ದು ಬಂದೇ ಬಿಟ್ಟಾ. ನನಗಂತೂ ಮೂಟೆ ಹೊರುವುದು ತಪ್ಪೋದೇ ಇಲ್ಲಾ.

**ಬೆಕ್ಕು:** (ತುಂಬಾ ಕೋಪದಿಂದ ರಂಗದೊಳಗೆ ಬರುತ್ತಾ) ಏಯ್ ಗಿಣಿಯಕ್ಕಾ, ನಿನ್ನನ್ನ ಕೊಂದೇ ಬಿಡಬೇಕು ಅನ್ನಿಸುತ್ತಿದೆ.

**ಗಿಳಿ:** (ಭಯದಿಂದ) ಯಾಕೆ, ಏನಾಯ್ತು ಅಕ್ಕಾ?

**ಬೆಕ್ಕು:** ಮತ್ತೆ, ಸೂರ್ಯ ಸತ್ತ ಅಂತ ಹೇಳಿ ಇಲ್ಲ ಸಲ್ಲದ ಆಸೆ ಹುಟ್ಟಿಸಿದ್ದೆ. ನಿನ್ನನ್ನ ಮಾತ್ರ ಸುಮ್ಮನೇ ಬಿಡಲ್ಲಾ ನಾನು. (ಗಿಣಿಯ ಹತ್ತಿರ ಬಂದು)

**ಗಿಳಿ:** ಬೇಡ ಬೇಡಾ ಅಕ್ಕಾ.

**ಬೆಕ್ಕು:** ನಿನ್ನೆ ನೀನು ಏನು ಹೇಳಿದ್ದೆ ಸೂರ್ಯ ಸತ್ತು ಹೋದ ಅಂತಾ ತಾನೆ. ಈಗ ಮತ್ತೆ ಹೇಗೆ ಬಂದ?

**ಗಿಳಿ:** ಅದೇ ನನಗೂ ತಿಳೀತಿಲ್ಲ. ಅವನು ಆ ಪರ್ವತದ ಅಂಚಿನಲ್ಲಿ ಬಿದ್ದು ಹೋಗಿ ಮರೆಯಾಗಿದ್ದನ್ನ ನಾನೇ ನೋಡಿದ್ದೆ.

**ಬೆಕ್ಕು:** ನಿನ್ನ ಮಾತು ನಂಬಿ ನಿನ್ನೆ ರಾತ್ರಿ ನಾನು ನನ್ನ ಯಜಮಾನನ ಮನೆಯಲ್ಲಿ ಇದ್ದ ಹಾಲನ್ನೆಲ್ಲ ಕದ್ದು ಕುಡಿದಿದ್ದೆ. ಈಗ ಅವನು ನನ್ನ ಮನೆಯಿಂದ ಹೊರಗೆ ಹಾಕಿದ್ದಾನೆ.

**ಗಿಳಿ:** ಹೌದಾ? ಅಯ್ಯೋ ಪಾಪ!

**ಬೆಕ್ಕು:** ಅಯ್ಯೋ ಪಾಪ ಅಂತೀಯಾ? ನಿನ್ನನ್ನ ಮಾತ್ರ ಸುಮ್ನೆ ಬಿಡಲ್ಲಾ. ನಿನ್ನನ್ನ ಕೊಂದೇ ಬಿಡ್ತೀನಿ. (ಬೆಕ್ಕಮ್ಮಾ ಮತ್ತು ಗಿಣಿಯಕ್ಕಾ ಎರಡೂ ಬಹಳ ಜಗಳ ಆಡಲು ಶುರು ಮಾಡುತ್ತವೆ) ಸ್ವಲ್ಪ ಹೊತ್ತು ಜಗಳ ಆಗುತ್ತದೆ;

**ನಾಯಿ, ಕತ್ತೆ:** ಬಿಡ್ರಿ, ಬಿಡ್ರಿ. ಜಗಳಾ ಮಾಡಬ್ಯಾಡ್ರಿ. ನಿಲ್ಲಿಸಿರಿ ಜಗಳಾ ಆಡೂದನ್ನ. ಸುಮ್ ಸುಮ್ಮನೇ ಪ್ರಾಣ ಕಳಕೋಬ್ಯಾಡ್ರೀ. (ಬೆಕ್ಕು ಗಿಳಿ ಜಗಳ ನಿಲ್ಲಿಸುತ್ತವೆ)

**ಎಲ್ಲವೂ ಸೇರಿ:** ಸೂರ್ಯ ಹುಟ್ಟುವುದು, ಮುಳುಗುವುದು ನಮ್ಮ ಕೈಯಲ್ಲಿ ಇಲ್ಲ. ಅದು ದಿನಾಲೂ ನಡೆಯುವ ಆಟ. ನಮ್ಮ ನಮ್ಮ ಜೀವನ ನಾವು ಬದುಕ ಬೇಕು. ಜಗಳಾ ಆಡುವುದು ಬೇಡ. ಪ್ರೀತಿಯಿಂದ ಕೂಡಿ ಬದುಕೋಣ. *


**ಸಂಪರ್ಕ ಮಾಹಿತಿ**

**ಧ್ವನಿ**

**ಶೈಕ್ಷಣಿಕ ಸಂಪನ್ಮೂಲ ಕೇಂದ್ರ**

**# ೭೬, 'ಪುಷ್ಪಾಂಜಲಿ'**

**೩ನೇ ಅಡ್ಡರಸ್ತೆ, ಶಿವಗಿರಿ**

**ಧಾರವಾಡ – ೫೮೦ ೦೦೭**

**ಮೊ: ೯೯೮ ೬೬೬ ೧೦೫೫**

**dhwanitrust@gmail.com**

**www.dhwanitrust.org**



ಗಮನಿಸಿ: ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೆ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪೇಕ್ಷಣೀಯ.

# ಮುಖವಾಡ - ಬೆಕ್ಕು



ನಾಯಿ - ಮುಖವಾಡ



# ಮುಖವಾಡ – ಕತ್ತೆ



# ಮುಖವಾಡ – ಗಿಳಿ

